ಅವನನ್ನು ತೆಗೆದುಕೊಂಡು ಬಂದ ಕಾವ್ಯ ಜೈನ ತತ್ತ್ವಕ್ಕೆ ಸವಾಲೊಡ್ಡಿದೆ. ಅಂದರೆ, ದೇಹ ಪ್ರಾಶಸ್ತ್ಯಕ್ಕೆ ಏನು ನಾವು ಮಹತ್ತ್ವ ಕೊಡ್ತೇವೆಯೋ ಅದರಾಚೆಗೂ ಒಂದು ಬದುಕಿದೆ ಅಂತ ಈ ಪಾತ್ರ ಹೇಳ್ತಿದೆ. ಅವನ ಪ್ರಕಾರ ಸಂಗೀತವೆನ್ನುವುದು ಲೌಕಿಕವನ್ನು ಹಾಗೆ ಮೀರುವ ಒಂದು ಪಾರಮಾರ್ಥಿಕ ಸ್ಥಿತಿ. ಪರಮಾರ್ಥ ಅದು. ಆ ಪರಮಾರ್ಥಕ್ಕೆ ಆತ ತನ್ನನ್ನು ತಾನು ಒಡ್ಡಿಕೊಂಡಿದ್ದ. ಇವಳ ಶಿಫ್ಟ್ ನೋಡಿ. ಯಾವುದು ದೇಹಕ್ಕೆ ಸಂಬಂಧ ಪಟ್ಟಿದ್ದೋ ಅದನ್ನು ದಾಟಿ ದೇಹಾತೀತವಾದ ಒಂದು ಸ್ಥಿತಿಗೆ ಇವಳು ಹಂಬಲಿಸ್ತಾಳೆ. ಯಾವುದು ಹೊಳಹಿಗೆ ಸಂಬಂಧ ಪಟ್ಟಿದೆಯೋ ಆ ಹಂತಕ್ಕೆ ಹೋಗ್ತಾಳಿವಳು. ಜನ್ನ ಇದನ್ನು ಎಷ್ಟು ಸೂಕ್ಷ್ಮವಾಗಿ ನಿಭಾಯಿಸ್ತಾ ಇದ್ದಾನೆ ನೋಡಿ. ಹೀಗೆ ಭಿನ್ನ ಭಿನ್ನವಾದದ್ದನ್ನು ತನ್ನೊಳಗೆ ಅಳವಡಿಸಿಕೊಂಡಿದ್ದರಿಂದ ಈ ಕಾವ್ಯಕ್ಕೆ ದೊಡ್ಡದೊಂದು ಸ್ಥಾನ ಪ್ರಾಪ್ತವಾಗಿದೆ. ವಿಭಿನ್ನ ದರ್ಶನಗಳ ಮುಖಾಮುಖಿ ಮಾಡ್ತಿದೆ. ಧರ್ಮ ಯಾವುದನ್ನು ಒತ್ತಾಯ ಮಾಡ್ತಾ ಇದೆಯೊ ಕಾವ್ಯ ಅದನ್ನು ಸೂಕ್ಷ್ಮವಾಗಿ ನಿರಾಕರಣೆ ಮಾಡ್ತಿದೆ. ದಿಸ್ ಈಜ್ ದ ಬ್ಯೂಟಿ ಆಫ್ ಪೊಯೆಟ್ರಿ. ಕಾವ್ಯದ ಹಲವು ಆಯಾಮಗಳನ್ನು ನೋಡಬೇಕು ಅನ್ನೋದು ನನ್ನ ಹಂಬಲ. ಹೀಗಾಗಿ, ಅನೇಕಾಂತವಾದದ ಪ್ರಶ್ನೆಯನ್ನ ವಿಮರ್ಶೆಯ ತತ್ತ್ವವಾಗಿ ಬಳಸಿಕೊಳ್ಳೋಕೆ ಸಾಧ್ಯ ಇದೆಯಲ್ವೆ? ಹೀಗೆ ನೋಡೋದರಿಂದ ಒಂದು ತರಹದ ನಿರಹಂಕಾರತ್ವ ನಮಗೆ ಪ್ರಾಪ್ತವಾಗ್ತದೆ ಕಾವ್ಯ ಓದುವಾಗ. ಕಾವ್ಯವನ್ನು ನೋಡುವ ಸೂಕ್ಷ್ಮಗ್ರಾಹ್ಯಗಳು ದಕ್ಕುತ್ತವೆ. ನನ್ನ ಅಭಿಪ್ರಾಯ ಏನಂದ್ರೆ, ನಮ್ಮ ನಡುವೆ ಇರುವ ಇಂಥ ಅನೇಕ ವಿಭಿನ್ನವಾದ ತಾತ್ತ್ವಿಕ ಚೌಕಟ್ಟುಗಳನ್ನು ಮರೆತಿದ್ದೀವಿ. ಮರೆವಿಗೆ ಹೋದಂಥ ಇಂಥ ತತ್ತ್ವಗಳನ್ನು ಹಳಗನ್ನಡ ಕಾವ್ಯಗಳಿಗೂ ಹೊಸಗನ್ನಡ ಕಾವ್ಯಗಳಿಗೂ ಬಳಸೊ ಪ್ರಯತ್ನ ಯಾಕೆ ಮಾಡಬಾರದು ಅಂತ. ಅನೇಕಾಂತವಾದವನ್ನು ಕೇವಲ ಜೈನ ಧರ್ಮಕ್ಕೆ ಕೀಲಿಸಿ ಇಡಬೇಕಾಗಿಲ್ಲ. ಅದನ್ನು ನಮ್ಮ ವಿಮರ್ಶೆಯ ತಿಳಿವಳಿಕೆಗಾಗಿ ಬಳಸಬೇಕಲ್ಲವೆ?

◆ **ನಿಮ್ಮದೊಂದು ಲೇಖನದಲ್ಲಿ ಜಾಗತೀಕರಣದ ಹೊತ್ತಿನಲ್ಲಿ ಕನ್ನಡ ಲೇಖಕರು ತುಳಿಯಬಹುದಾದ ದಾರಿ ಕುರಿತು ಕೆಲ ಸೂಚನೆಗಳನ್ನು ಕೊಟ್ಟಿದ್ರಿ. ಅದನ್ನೊಮ್ಮೆ ಓದಿ ಬಿಡ್ತೇನೆ: 'ಇಂಥ ಸಂದರ್ಭಗಳಲ್ಲಿ (ಜಾಗತೀಕರಣ) ಸಾಹಿತ್ಯವು ತನ್ನ ವಿಶಿಷ್ಟತೆಯನ್ನು ಅನೇಕ ಅರ್ಥಗಳಲ್ಲಿ ಕಳೆದುಕೊಳ್ಳಬೇಕಾಗುತ್ತದೆ. ಸೃಜನಶೀಲ ಬರವಣಿಗೆ ವಿಶಿಷ್ಟತೆ ಕಡೆಗೆ ವಾಲುವುದನ್ನು ನಿಲ್ಲಿಸಬೇಕಾಗುತ್ತದೆ. ವ್ಯಕ್ತಿಮೂಲ ಮತ್ತು ಪ್ರಾಧಾನ್ಯದ ತಾತ್ತ್ವಿಕ ನೆಲೆಗಳನ್ನು ಸೃಷ್ಟಿಸುವ ನಾಟಕೀಯ ಶೈಲಿಗಳನ್ನು ಕೈಬಿಡಬೇಕಾಗುತ್ತದೆ. ಈ ಮೂಲಕ ಬರಹಗಾರ ತನ್ನ ವಿಶಿಷ್ಟ ಚಹರೆಯನ್ನು ಪ್ರಯತ್ನಪೂರ್ವಕವಾಗಿ ಕಳೆದುಕೊಳ್ಳಬೇಕಾಗುತ್ತದೆ.' ಈ ಟೋನ್ ಏನಿದು? ಅಂದರೆ, ವಿಶಿಷ್ಟತೆ ಬಿಟ್ಟುಕೊಡೋದು, ವ್ಯಕ್ತಿ ಮತ್ತು ಪ್ರಾಧಾನ್ಯತೆಯನ್ನು ಬಿಟ್ಟುಕೊಡೋದು, ಚಹರೆಗಳನ್ನು ಕಳೆದುಕೊಳ್ಳುವುದು ಇವುಗಳನ್ನು ಯಾವ ಅರ್ಥಗಳಲ್ಲಿ ಬಳಸಿದ್ದೀರಿ. ಪ್ರಯತ್ನಪೂರ್ವಕವಾಗಿ ಇವುಗಳನ್ನು ಕಳೆದುಕೊಳ್ಳುವುದು ಅಂದರೇನು?**

ಇದು ಮೂಲಭೂತವಾಗಿ ನವ್ಯದ ಕ್ರಿಯೇಟಿವಿಟಿಯನ್ನು ಪ್ರಶ್ನೆ ಮಾಡ್ತದೆ. ಯಾಕೆಂದರೆ, ಅಲ್ಲಿ ವ್ಯಕ್ತಿ ಕೇಂದ್ರಿತ ಪ್ರಜ್ಞೆ ಪ್ರಧಾನವಾಗಿ ರಾರಾಜಿಸ್ತಾ ಇತ್ತು. ತನ್ನನ್ನು ತಾನು ವಿಶಿಷ್ಟವಾಗಿ ಕಲ್ಪಿಸಿಕೊಳ್ಳುವ, ತಾನು ವಿಶಿಷ್ಟವಾಗಿ ಲೋಕವನ್ನು ಗ್ರಹಿಸಬಲ್ಲೆ, ಹಾಗೆ ಗ್ರಹಿಸುವುದರ ಮೂಲಕ ಲೋಕವನ್ನು ಬದಲಿಸಬಲ್ಲೆ ಎಂಬ ಒಂದು ಆಯಾಮ ಅಲ್ಲಿತ್ತು. ಇನ್ನೊಂದು ಕಡೆಗೆ ಲೋಕವೊಂದು ಇದೆ, ಆದರೆ ನಾನು ಅದಕ್ಕಿಂತ ಭಿನ್ನ ಅಂತ ಹೇಳೊ ಕ್ರಮ ಕೂಡ ಅಲ್ಲಿತ್ತು. ಲೋಕದ ಭಾಗವಾಗಿ ಅಲ್ಲ, ಲೋಕಕ್ಕಿಂತ ಭಿನ್ನವಾಗಿ ಇರುವಂಥ ಒಂದು ವ್ಯಕ್ತಿತ್ವವನ್ನು ಆರೋಪಿಸಿಕೊಳ್ಳಲಾಗಿತ್ತು. ಏಲಿನೇಟೆಡ್ ಆದಂಥ ಒಂದು ವ್ಯಕ್ತಿತ್ವ ಅದು. ಒಂಟಿತನದ ತತ್ತ್ವದ ಮೂಲಕ ಸಾಧ್ಯವಾದಂಥ ಅನೇಕ ಫಿಲಾಸಫಿಗಳು ಪಶ್ಚಿಮದಲ್ಲಿವೆ.